# ಸ್ಮಾರ್ಟ್ ಕಾಣಲು ಸ್ಮಾರ್ಟ್ ವಾಚ್




**ವಾಚು ಸಮಯ ನೋಡಲಷ್ಟೇ ಎನಿಸಿದ್ದ ದಿನಗಳಿದ್ದವು. ಇದೀಗ ವಾಚುಗಳು ಫ್ಯಾಷನ್‌ನ ಒಂದು ಭಾಗವಾಗಿ ಟ್ರೆಂಡ್ ಸೃಷ್ಟಿಸಿವೆ. ಕಾಲ ಬದಲಾದಂತೆ ಸಮಯ ಸೂಚಕಗಳೂ ಕಾಲಕ್ಕೆ ತಕ್ಕಂತೆ ಬದಲಾಗಿವೆ.**

■ **ಉಮಾ ಅನಂತ್**

ಸುಮಾರು ಇಪ್ಪತ್ತೈದು ವರ್ಷಗಳಷ್ಟು ಹಿಂದಿನ ಮಾತು. ಅದು ಏಳನೇ ತರಗತಿ ಮಕ್ಕಳ ಬೀಳ್ಕೊಡುಗೆ ಸಮಾರಂಭದ ದಿನ. ಎಲ್ಲ ಮಕ್ಕಳಿಗೆ ಗ್ರೂಪ್ ಫೋಟೊದಲ್ಲಿ ಪೋಸು ಕೊಡುವ ಸಂಭ್ರಮ. ಎಲ್ಲರೂ ಅವರವರ ಅಪ್ಪಂದೋ, ಅಣ್ಣಂದೋ ವಾಚು ಕಟ್ಟಿಕೊಂಡು ಪದೇ ಪದೇ ಗಂಟೆ ನೋಡಿಕೊಂಡು ಬೀಗುತ್ತಿದ್ದರು. ಕೆಲವರಂತೂ ಮಾವನ ಬಳಿಯೋ ಚಿಕ್ಕಪ್ಪನ ಬಳಿಯೋ ಕಾಡಿ ಬೇಡಿ ದೊಡ್ಡ ಡಯಲ್‌ನ ವಾಚ್ ಅನ್ನು ಒಂದು ದಿನಕ್ಕೆಂದು ಪಡೆದು ಕೈಗೆ ಕಟ್ಟಿ ಬಂದಿದ್ದರು. ಗ್ರೂಪ್ ಫೋಟೊ ತೆಗೆಯುವ ಸಮಯ ಬಂದಾಗ ಕೈಗೆ ಕಟ್ಟಿದ ವಾಚು ಫೋಟೊದಲ್ಲಿ ಬರಲಿ ಎಂದು ಎತ್ತಿ ಹಿಡಿದದ್ದೂ ಆಯಿತು. ಆ ಸಂಭ್ರಮವೂ ಕಳೆಯಿತು.

ಆಗ ಇದ್ದದ್ದು ಕೆಲವೇ ವಿನ್ಯಾಸದ ಬೆಲ್ಟ್ ಅಥವಾ ಸ್ಟೀಲ್ ಚೈನ್‌ನ ವಾಚು. ವಾಚು ಎಂದರೆ ಐಷಾರಾಮಿ ಎನಿಸಿದ್ದ ದಿನಗಳವು. ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದವರು, ಸಿನಿಮಾ ನಟರು, ಬ್ಯಾಂಕ್ ಅಧಿಕಾರಿಗಳು, ಕಾಲೇಜು ಉಪನ್ಯಾಸಕರು ಮಾತ್ರ ವಾಚುಗಳನ್ನು ಕಟ್ಟುತ್ತಿದ್ದ ಕಾಲವದು. ಅಂದು ಅದು ಸಮಯ ತೋರಿಸುವ ಸಾಧನವಷ್ಟೇ ಆಗಿತ್ತು. ಗಂಡಸರಿಗೆ ದೊಡ್ಡ ಫ್ರೇಮಿನ ವಾಚು, ಹೆಣ್ಣು ಮಕ್ಕಳಿಗೆ ಚಿಕ್ಕ ಫ್ರೇಮಿನ ವಾಚು. ಆಯ್ಕೆಗಳೂ ಬಹಳ ಕಡಿಮೆ. ಅಲ್ಲದೆ ಆಗೆಲ್ಲ ಎಚ್‌ಎಂಟಿ ವಾಚುಗಳದ್ದೇ ಜಮಾನ. ಅದಾಗಿ ಕ್ವಾರ್ಟ್ಜ್ ವಾಚುಗಳು ಬಂದು ವಾಚುಗಳಿಗೆ ಡಿಜಿಟಲ್ ಸ್ಪರ್ಶ ಬಂತು. ಡಯಲ್‌ಗಳಲ್ಲಿ ಮುಳ್ಳುಗಳ ಬದಲಿಗೆ ಸಂಖ್ಯೆಗಳು ಸಮಯ ತೋರಿಸುವಂಥ ವಾಚುಗಳವು.

## 3ಡಿ ಪ್ರಿಂಟಿಂಗ್ ವಾಚ್ ಟ್ರೆಂಡ್

ಟೈಟಾನ್ ಕಂಪನಿ ವಾಚುಗಳ ತಯಾರಿಕೆಯಲ್ಲಿ, ಫ್ಯಾಷನ್, ವಿನ್ಯಾಸಗಳಲ್ಲಿ ಮುಂಚೂಣಿಯಲ್ಲಿರುವ ಬ್ರ್ಯಾಂಡ್. ಈ ಕಂಪನಿಯಲ್ಲಿ ಕಳೆದ 25 ವರ್ಷಗಳಿಂದ ಮುಖ್ಯ ವಿನ್ಯಾಸಗಾರ್ತಿಯಾಗಿರುವ ರೇವತಿ ಕಾಂತ್, ವಾಚು ವಿನ್ಯಾಸ, ಮಾರುಕಟ್ಟೆ ಟ್ರೆಂಡ್ ಬಗ್ಗೆ ಆಫ್ರಿಕಾ ಹಾಗೂ ದಕ್ಷಿಣ ಏಷ್ಯಾಗಳಲ್ಲಿ ಆಳವಾದ ಅಧ್ಯಯನವನ್ನೂ ನಡೆಸಿದವರು. ಸದ್ಯ ಮುಂಬಯಿಯಲ್ಲಿರುವ ಈ ವಿನ್ಯಾಸಗಾರ್ತಿ ವಾಚು ವಿನ್ಯಾಸ, ಫ್ಯಾಷನ್, ಟ್ರೆಂಡ್ ಮುಂತಾದ ವಿಷಯಗಳ ಬಗ್ಗೆ 'ಸುಧಾ' ಕ್ಕೆ ಮಾಹಿತಿ ನೀಡಿದ್ದಾರೆ.

- ಸಮಯ ನೋಡಲಷ್ಟೇ ಮೀಸಲಾಗಿದ್ದ ವಾಚುಗಳು ಫ್ಯಾಷನ್‌ನೊಂದಿಗೆ ಎಡತಾಕಿದ್ದು ಹೇಗೆ?

ಹಿಂದೆಲ್ಲಾ ವಾಚ್ ಎಂದರೆ ಅದು ಸಮಯ ನೋಡಲಷ್ಟೇ ಎಂಬ ಕಲ್ಪನೆ ಜನರಲ್ಲಿತ್ತು. ಆದರೆ ಈಗ ಟ್ರೆಂಡ್ ಬದಲಾಗಿದೆ. ಫ್ಯಾಷನ್ ವಾಚ್‌ಗಳಿಗೂ ಎಡತಾಕಿದ್ದು, ಅತ್ಯಾಕರ್ಷಕ ವಿನ್ಯಾಸಗಳ ವಾಚುಗಳು ಮಾರುಕಟ್ಟೆಗೆ ಬಂದಿದೆ. ಅದೊಂದು ಫ್ಯಾಷನಬಲ್ ಆ್ಯಸೆಸ್ಸರೀಸ್ ಎಂಬಂತಾಗಿದೆ. ಫ್ಯಾಷನ್‌ಪ್ರಿಯರಿಂದ ಬೇಡಿಕೆ ಹೆಚ್ಚಾಗಿದೆ. ಗ್ರಾಹಕರ ಅಭಿಲಾಷೆ, ಮನೋಭಾವನೆ ಬದಲಾಗಿದೆ. ಇಂದಿನ ಫ್ಯಾಷನ್‌ಟ್ರೆಂಡ್‌ಗೆ ತಕ್ಕಂತೆ ವಾಚ್‌ಗಳನ್ನು ಹಾಕಿಕೊಳ್ಳುವಲ್ಲಿಯೂ ಜನ ಬದಲಾವಣೆ ಹಾಗೂ ಟ್ರೆಂಡ್ ಅನ್ನೇ ಬಯಸುತ್ತಿದ್ದಾರೆ. ಅದರಂತೆ ವಾಚುಗಳ ಆಯ್ಕೆಯಲ್ಲೂ ಸಾಕಷ್ಟು ವೈವಿಧ್ಯಗಳಿವೆ. ಬ್ರ್ಯಾಂಡ್, ಬೆಲೆ ವಿನ್ಯಾಸ ವೈವಿಧ್ಯಗಳಲ್ಲೂ ನೂರಾರು ಆಯ್ಕೆಗಳು ಗ್ರಾಹಕರಿಗಿದೆ.

- ವಾಚುಗಳಲ್ಲಿ ಗ್ರಾಹಕರಿಗೆ ಇಂದು ಸಾಕಷ್ಟು ಆಯ್ಕೆಗಳಿವೆ ಎಂದಿರಿ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಫ್ಯಾಷನ್‌ಪ್ರಿಯರ ಮನದಾಸೆಗೆ ತಕ್ಕಂತೆ ವಾಚುಗಳು ಪೂರೈಕೆಯಾಗುತ್ತಿದೆಯಾ?

ಗ್ರಾಹಕರ 'ಚ್ಯೂಸಿ ಮೆಂಟಾಲಿಟಿ'ಯನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಅವರ ಬೇಡಿಕೆಗಳಿಗೆ ತಕ್ಕಂತೆ ವಿನ್ಯಾಸವನ್ನೂ ಆಕರ್ಷಕಗೊಳಿಸುವುದು ಬಹಳ ಮುಖ್ಯ. ಕೆಲವರಿಗೆ ಸೈದ್ಧಾಂತಿಕ ಅಭಿಪ್ರಾಯಗಳಿರುತ್ತವೆ. ವಾಚುಗಳನ್ನು ಕೊಳ್ಳುವಾಗಲೂ ತಾತ್ವಿಕ ಚಿಂತನೆ ನಡೆಸಿ ತಮ್ಮ ಆಯ್ಕೆಯನ್ನು ಸೀಮಿತಗೊಳಿಸುತ್ತಾರೆ. ಇದಕ್ಕಾಗಿಯೇ 'ಡಿಸೈನ್ ಟು ಇನ್‌ಸ್ಪಯರ್' ಪರಿಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಇದು ವಾಚುಗಳಿಗಷ್ಟೇ ಅಲ್ಲ, ಒಡವೆ, ಕನ್ನಡಕಗಳಿಗೂ ಅನ್ವಯಿಸುತ್ತದೆ. ಫ್ಯಾಷನ್‌ಪ್ರಿಯರ ಆಕಾಂಕ್ಷೆ, ಅಭಿಲಾಷೆ, ಅಭಿರುಚಿಗಳಿಗೆ ತಕ್ಕಂತೆ ಹಾಗೂ ಅವರನ್ನು ತೃಪ್ತಿಪಡಿಸುವ ನಿಟ್ಟಿನಲ್ಲಿ ವಿನ್ಯಾಸದಲ್ಲೂ ವೈವಿಧ್ಯತೆಯನ್ನು ರೂಪಿಸಲು ಪ್ರಯತ್ನಿಸುತ್ತಿದ್ದೇವೆ.

ಇಂದಿನ ವಿನ್ಯಾಸ ಕ್ಷೇತ್ರಕ್ಕೆ ತಂತ್ರಜ್ಞಾನವೇ ದೊಡ್ಡ ಆಸ್ತಿ. ಹೊಸ ವಿನ್ಯಾಸಗಳಾದ ತ್ರಿಡಿ ಪ್ರಿಂಟಿಂಗ್ ಹಾಗೂ ಕೃತಕ ಬುದ್ಧಿಮತ್ತೆಯ ಫಲವಾಗಿ ಇಂದು ವಿನ್ಯಾಸಗಳು ಜನಸ್ನೇಹಿಯಾಗಿವೆ. ಗ್ರಾಹಕರ ಆಸೆ ಹಾಗೂ ನಂಬಿಕೆಗಳಿಗೆ ತಕ್ಕಂತೆ ಅಂದ, ಫ್ಯಾಷನ್ ಹಾಗೂ ಬಾಳಿಕೆ... ಈ ಎಲ್ಲಾ ಆಯಾಮಗಳಿಂದ ಚಿಂತನೆ ನಡೆಸಿ ವಾಚು ತಯಾರಿಸುತ್ತೇವೆ. ಇದೀಗ ಅತ್ಯಾಧುನಿಕವಾದ 'ಸ್ಮಾರ್ಟ್‌ವಾಚು'ಗಳು ಬಂದಿದ್ದು ಪರಿಸರಸ್ನೇಹಿಯೂ ಆಗಿದೆ.

- ನಿಮ್ಮ ಪ್ರಕಾರ ವಾಚ್‌ಗಳಲ್ಲಿ ಟ್ರೆಂಡ್‌ಸೆಟ್ಟರ್ ಅಂದರೆ ಯಾವುದು?

ಇಂದು ನಾವು 'ಸ್ಮಾರ್ಟ್ ಟೆಕ್ನಾಲಜಿ' ಯುಗದಲ್ಲಿದ್ದೇವೆ. ಪರಿಸರಸ್ನೇಹಿ ವಾಚುಗಳೂ ಇಂದಿನ ಕಾಲಮಾನಕ್ಕೆ ಸೂಕ್ತವಾದ ಫ್ಯಾಷನಬಲ್ ಬಾಚು ಎನಿಸಿಕೊಂಡಿದೆ. ಈ ವಾಚುಗಳು ದಿನದ ಸಮಯವನ್ನಷ್ಟೇ ತೋರಿಸುವುದಲ್ಲದೆ